MR. SPEAKER : The Minister will take necessary appropriate action. Don't worry.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೆ, ಇದು ಜನರಿಗೆ ಕುಡಿಯುವ ನೀರಿನ ಸಮಸ್ಯೆಯಾದುದರಿಂದ ಗಂಭೀರವಾಗಿ ಪರಿಗಣಿಸಬೇಕು. ಬಂದ ಹಣವನ್ನು ಯಾವತ್ತಿನಿಂದ ಡೆಪಾಸಿಟ್ ಮಾಡಿದ್ದಾರೆಂಬುದನ್ನು ಹೇಳಬಹುದಲ್ಲವೆ?

MR. SPEAKER : He will take appropriate action against them. ನೀವು ಒಮ್ಮಿಂದೊಮ್ಮೆಗೆ ಪ್ರಶ್ನೆಗಳನ್ನು ಕೇಳಿದರೆ ಸಚಿವರು ಉತ್ತರಿಸಲು ಆಗುವುದಿಲ್ಲ. ಪ್ರತ್ಯೇಕವಾದ ಪ್ರಶ್ನೆಗಳನ್ನು ಕೇಳಿ ವಿವರಗಳನ್ನು ಕೊಡುತ್ತಾರೆ. ಇಲ್ಲಿ ಪ್ರಶ್ನೆ ಹಾಕಿದವರು ಬಸವರಾಜ್‌ರವರು. ನಿಮಗೆ ವಿವರಗಳು ಬೇಕಾದರೆ ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಿ. ಸಚಿವರ ಹತ್ತಿರ ದಿನಾಂಕ ಇತ್ಯಾದಿ ವಿವರಗಳು ಸದ್ಯಕ್ಕೆ ಇರುವುದಿಲ್ಲ. ಇದ್ದಿದ್ದರೆ ಹೇಳುತ್ತಿದ್ದರು. Please put a seperate question. If Mr.Basavaraj sends a seperate notice to take it up under Half-an-hour discussion, we will take it up. ಮಾನ್ಯ ಸಚಿವರು ಯಾವ ದಿನಾಂಕದಂದು ಬ್ಯಾಂಕ್‌ನಲ್ಲಿ ಡೆಪಾಸಿಟ್ ಮಾಡಿದ್ದಾರೆಂಬ ಬಗ್ಗೆ ಸಾಯಂಕಾಲದೊಳಗಾಗಿ ಹೇಳಿ.

ಬಸವಕಲ್ಯಾಣದಲ್ಲಿ 100 ಹಾಸಿಗೆವುಳ್ಳ ಸರ್ಕಾರಿ ಆಸ್ಪತ್ರೆಯನ್ನು ತೆರೆಯುವುದು

410 - ಶ್ರೀ ಎಂ.ಜಿ.ಮುಳೆ (ಬಸವಕಲ್ಯಾಣ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಸವಕಲ್ಯಾಣ ಪಟ್ಟಣವು ಬೀದರ್ ಜಿಲ್ಲೆಯಲ್ಲಿ ಬೀದರಿನ ನಂತರ ಎರಡನೇ ದೊಡ್ಡ ಪಟ್ಟಣವಾಗಿರುವುದು ನಿಜವಲ್ಲವೇ? ಈಗ ಬಸವಕಲ್ಯಾಣ ಪಟ್ಟಣದಲ್ಲಿ ಹಾಲಿ ಇರುವ ಸರ್ಕಾರಿ ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆ ಎಷ್ಟು?*

ಆ) *ಬಸವಕಲ್ಯಾಣ ಪಟ್ಟಣದಲ್ಲಿ 100 ಹಾಸಿಗೆ ಆಸ್ಪತ್ರೆಯನ್ನು ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ? ಹಾಗಿದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?*

ಇ) *100 ಹಾಸಿಗೆಯ ಆಸ್ಪತ್ರೆಯನ್ನು ಸ್ಥಾಪಿಸಲು ಸರ್ಕಾರದಲ್ಲಿ ಇದ್ದ ಮಾನದಂಡವೇನು? ಬೀದರ ಜಿಲ್ಲೆಯ ಭಾಲ್ಕಿ ಮತ್ತು ಹುಮನಾಬಾದಿನಲ್ಲಿ 100 ಹಾಸಿಗೆಗಳ ಆಸ್ಪತ್ರೆ ತೆರೆಯಲು ಸರ್ಕಾರ ಹಾಕಿಕೊಂಡ ಮಾನದಂಡ ಯಾವುದು?*

ಡಾ|| ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು, ಬಸವಕಲ್ಯಾಣ ಪಟ್ಟಣದಲ್ಲಿ ಹಾಲಿ ಇರುವ ಸರಕಾರಿ ಆಸ್ಪತ್ರೆಯ ಹಾಸಿಗೆ ಸಂಖ್ಯೆಯು 30 ಆಗಿರುತ್ತದೆ.

ಅ) ಬಸವಕಲ್ಯಾಣದಲ್ಲಿ 100 ಹಾಸಿಗೆಗಳ ಆಸ್ಪತ್ರೆ ತೆರೆಯುವ ಉದ್ದೇಶ ಇರುವುದಿಲ್ಲ. ಜರ್ಮನ್ ನರವಿನ ಕೆಎಫ್‌ಡಬ್ಲ್ಯೂ ಯೋಜನೆಯಡಿ ಈ ಆಸ್ಪತ್ರೆಯನ್ನು 30 ಹಾಸಿಗೆಗಳ ಆಸ್ಪತ್ರೆಯಿಂದ ಉನ್ನತೀಕರಿಸಿ 50 ಹಾಸಿಗೆಗಳ ಆಸ್ಪತ್ರೆಯಾಗಿ ಅಭಿವೃದ್ಧಿ ಪಡಿಸಲಾಗುತ್ತಿದೆ.

ಆ) ಯೋಜನಾ ವರದಿಯನ್ನು ತಯಾರಿಸುವ ಮೊದಲು ನಡೆಸಿದ ಸರ್ವೇಕ್ಷಣಾ ಕಾಲದಲ್ಲಿ ಆಸ್ಪತ್ರೆಗಳಲ್ಲಿ ಲಭ್ಯವಿರುವ ಸೌಲಭ್ಯಗಳು ಹಾಗೂ ಅಗತ್ಯವಿರುವ ಸೌಲಭ್ಯಗಳನ್ನು ಗಮನದಲ್ಲಿಟ್ಟು ಆಸ್ಪತ್ರೆಗಳ ಹಾಸಿಗೆ ಸಾಮರ್ಥವನ್ನು ನಿಗದಿ ಪಡಿಸಲಾಗಿದೆ. ದಿನಾಂಕ 9.3.1994ರ ಸರ್ಕಾರಿ ಆದೇಶದನ್ವಯ ರಾಜ್ಯವಲಯದಡಿ ಭಾಲ್ಕಿಯಲ್ಲಿ 100 ಹಾಸಿಗೆಗಳ ಆಸ್ಪತ್ರೆಯನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿತ್ತು. ಈಗ ಈ ಕಾಮಗಾರಿಯನ್ನು ಕೆಎಫ್‌ಡಬ್ಲ್ಯೂ ಯೋಜನೆಯಡಿ ಕೈಗೆತ್ತಿಗೊಳ್ಳಲಾಗುತ್ತಿದೆ. ಮೇಲೆ ವಿವರಿಸಿರುವ ಮಾನದಂಡವನ್ನನುಸರಿಸಿ ಹುಮನಾಬಾದಿನಲ್ಲಿಯ ಸಾರ್ವಜನಿಕ ಆಸ್ಪತ್ರೆಯನ್ನು ಈಗಿನ 30 ಹಾಸಿಗೆಗಳಿಂದ ಉನ್ನತೀಕರಿಸಿ 50 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಅಭಿವೃದ್ಧಿಗೊಳಿಸಲು ಯೋಜಿಸಲಾಗಿದೆ.

ಶ್ರೀ ಎಂ.ಜಿ. ಮುಳೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಬಸವಕಲ್ಯಾಣವು ಇತರ ನಗರಗಳಿಗಿಂತ ಹೆಚ್ಚು ಜನಸಂಖ್ಯೆಯುಳ್ಳದ್ದಾಗಿದೆ. ಅದನ್ನು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಅಲ್ಲಿ ಪ್ರಸ್ತುತ 30 ಹಾಸಿಗೆಗಳ ಆಸ್ಪತ್ರೆಯು ಇದ್ದು 100ಹಾಸಿಗೆಗಳ ಆಸ್ಪತ್ರೆಯನ್ನು ಮಾಡಬೇಕೆಂದು ನಮ್ಮ ಬೇಡಿಕೆಯಾಗಿದೆ. ಅದು ಆಗುವುದಿಲ್ಲ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ನಮಗಿಂತ ಅರ್ಧದಷ್ಟು ಜನಸಂಖ್ಯೆ ಇರುವಲ್ಲಿ 100 ಹಾಸಿಗೆಗಳ ಆಸ್ಪತ್ರೆಯನ್ನು ಕೊಟ್ಟಿದ್ದಾರೆ. 65ಸಾವಿರ ಜನಸಂಖ್ಯೆ ಇರುವ ಬಸವಕಲ್ಯಾಣಕ್ಕೆ 30ಹಾಸಿಗೆಗಳ ಆಸ್ಪತ್ರೆಯು ಸಾಕಾಗುವುದಿಲ್ಲ. ಬೆಳೆಯುತ್ತಿರುವ ಬಸವಕಲ್ಯಾಣಕ್ಕೆ 100ಹಾಸಿಗೆಗಳ ಆಸ್ಪತ್ರೆಯನ್ನು ಅತೀ ಶೀಘ್ರದಲ್ಲಿ ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ ॥ ಎ.ಬಿ. ಮಾಲಕರೆಡ್ಡಿ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿರುವ ಎಲ್ಲಾ 174 ತಾಲ್ಲೂಕು ಆಸ್ಪತ್ರೆಗಳನ್ನು ಕರ್ನಾಟಕ ಆಸ್ಪತ್ರೆಗಳ ಅಭಿವೃದ್ಧಿ ಪ್ರಾಜೆಕ್ಟ್ ಅಡಿಯಲ್ಲಿ ಮೇಲ್ದರ್ಜೆಗೆ ಏರಿಸುತ್ತಾ ಇದ್ದೇವೆ. 30 ಹಾಸಿಗೆಗಳ ಆಸ್ಪತ್ರೆಯು 50 ಹಾಸಿಗೆಗಳ ಆಸ್ಪತ್ರೆಯಾಗುತ್ತದೆ. ಆದ್ದರಿಂದ ಬಸವಕಲ್ಯಾಣದ ಆಸ್ಪತ್ರೆಯ ಬಗ್ಗೆ ಕೂಡ ಈಗಾಗಲೇ ಮಂಜೂರಾತಿಯು ಸಿಕ್ಕಿದೆ. ಕಂಟ್ರಾಕ್ಟ್ ಕೂಡ ಕೊಡಲಾಗಿದೆ. ಅಲ್ಲಿ ಕೆಲಸ ನಡೆಯುತ್ತಿದೆ. ಭಾಲ್ಕಿಯಲ್ಲಿ 100ಹಾಸಿಗೆಗಳ ಆಸ್ಪತ್ರೆ ಇದ್ದು ಬಸವಕಲ್ಯಾಣಕ್ಕೆ ಏಕೆ ಇಲ್ಲ ಎಂಬ ಪ್ರಶ್ನೆ ಮಾನ್ಯ ಸದಸ್ಯರನ್ನು ಕಾಡುತ್ತಿದೆ. 1994ರಲ್ಲಿ ಮಾನ್ಯ ಭೀಮಣ್ಣ ಖಂಡ್ರೆಯವರು ಆರೋಗ್ಯ ಸಚಿವರಾಗಿದ್ದಾಗ ಭಾಲ್ಕಿಯ ಆಸ್ಪತ್ರೆಯನ್ನು ಮಂಜೂರು ಮಾಡಿಕೊಂಡಿದ್ದರು. ನಮ್ಮಲ್ಲಿ ಸಾರ್ವ್ಸ್ ಪ್ರಕಾರ ಆಸ್ಪತ್ರೆ ಮಂಜೂರು ಮಾಡುವ ಕೆಲಸವನ್ನು ಯಾರು ಮಾಡಿಲ್ಲ. ಪ್ರಭಾವಕ್ಕನುಗುಣವಾಗಿ ನಡೆಯುತ್ತಾ ಬಂದಿದೆ, ನಾನು ಇದನ್ನು ಹೇಳಬಾರದೆಂದಿದ್ದರೂ ಹೇಳುತ್ತಿದ್ದೇನೆ. ಇದುವರೆಗೂ ಯಾರು ಕೆಲಸ ಮಾಡಿಲ್ಲ. ಯಾವ ಆಸ್ಪತ್ರೆಗಳೂ ಮಂಜೂರಾಗಿಲ್ಲ. ಆದರೆ ತಮ್ಮ ತಪ್ಪು ತಿಳಿವಳಿಕೆಯಂತೆ ಬಸವಕಲ್ಯಾಣದ ಜನಸಂಖ್ಯೆ ಹೆಚ್ಚಿದೆ ಅಲ್ಲಿಗೆ ಕೇವಲ 50 ಏಕೆ, ಭಾಲ್ಕಿ ಜನಸಂಖ್ಯೆ ಕಡಿಮೆ ಇದೆ ಅಲ್ಲಿ 100 ಏಕೆ

ಎಂಬುದು ತಪ್ಪು. ಜನರಲ್ ಆಸ್ಪತ್ರೆಗಳು ಕೇವಲ ಆ ನಗರಕ್ಕೆ ಕೊಡುವುದಲ್ಲ, ಇಡೀ ತಾಲ್ಲೂಕಿಗೆಂದು ಕೊಡುತ್ತೇವೆ. ಅಲ್ಲಿ 8 ಜನ ಸ್ಪೆಶಲಿಸ್ಟ್ಸ್ ಇರುತ್ತಾರೆ. They are not meant only for town. They are meant for the entire taluk. ಬಸವಕಲ್ಯಾಣದ ಜನಸಂಖ್ಯೆ 2.8 ಲಕ್ಷ ಇದೆ, ಭಾಲ್ಕಿ ಜನಸಂಖ್ಯೆ 2.78 ಲಕ್ಷ ಇದೆ.

ಶ್ರೀ ಎಂ.ಜಿ. ಮುಳೆ : ಅಧ್ಯಕ್ಷರೆ, ಅವರು ನಮ್ಮ ಉಸ್ತುವಾರಿ ಸಚಿವರಿದ್ದಾರೆ. ನಮ್ಮ ಬಸವಕಲ್ಯಾಣದ ಬಗ್ಗೆ ಬಹಳ ಆಸಕ್ತಿ ಅವರಿಗಿದೆ. ನೇರವಾಗಿ ಒಪ್ಪಿಕೊಂಡರು ಖಂಡ್ರೆ ಸಾಹೇಬರು ಮಂತ್ರಿ ಇದ್ದರು ತಗೊಂಡರು ಎಂದು? ಆದರೆ ನಮ್ಮ ಅಟ್ಟೂರು ಸಾಹೇಬರೂ ಮಂತ್ರಿ ಇದ್ದರು, ಅವರಿಗ್ಯಾಕೆ ಸಿಗಲಿಲ್ಲ? ಎಲ್ಲಿ ಜನರಿಗೆ ತೊಂದರೆ ಆಗುತ್ತದೆಯೋ ಅಲ್ಲಿಗೆ ಆಸ್ಪತ್ರೆ ಕೊಡಬೇಕು. ನಮಗೆ ತೊಂದರೆ ಆಗುತ್ತಿದೆ, ಅಲ್ಲಿ ಅಲ್ಪಸಂಖ್ಯಾತರಿದ್ದಾರೆ ಲಾರಿ ಬಹಳ ಓಡಾಟ ಇದೆ, ಫ್ಲೋಟಿಂಗ್ ಜನಸಂಖ್ಯೆ ಇದೆ. ಅಂತಹ ಕಡೆ 100 ಬೆಡ್ ಹಾಕುವುದು ಅವಶ್ಯಕತೆ ಇದೆ. ಭಾಲ್ಕಿಗೆ ಕೊಟ್ಟಿದ್ದಕ್ಕೆ ನನ್ನದು ಆಕ್ಷೇಪಣೆ ಇಲ್ಲ. ಆದರೆ ಭಾಲ್ಕಿಗೆ ಕೊಟ್ಟಾಗಲೇ ಬಸವಕಲ್ಯಾಣಕ್ಕೂ ಕೊಡಬೇಕಾಗಿತ್ತು. ಆ ರೀತಿ ಬೇಗನೆ ಮಂಜೂರು ಮಾಡಿಕೊಡಬೇಕೆಂದು ಕೋರುತ್ತೇನೆ.

ಡಾ|| ಎ.ಬಿ. ಮಾಲಕರೆಡ್ಡಿ : ಆಟ್ಟೂರ್‌ರವರು ಸಚಿವರಾಗಿದ್ದಾಗ ಮಂಜೂರಾಗಲಿಲ್ಲ ಏಕೆಂದರೆ 1995ರಲ್ಲಿ Karnataka Health System Development Project ಆಸ್ತಿತ್ವದಲ್ಲಿ ಬಂತು. ವಿಶ್ವಬ್ಯಾಂಕ್ ಕೆಲವು ಮಾದರಿಗಳನ್ನು ಹಾಕಿ ಅವುಗಳಿಗೆ ಒಪ್ಪಿಕೊಂಡರಷ್ಟೇ ಅವರು ಹಣ ಕೊಡುವುದು. ಅವರು 570 ಕೋಟಿ ರೂಪಾಯಿಯಷ್ಟು ಹಣ ನೀಡಿದ್ದಾರೆ. ಆ ಮಾದರಿಗನುಗುಣವಾಗಿ ಆಸ್ಪತ್ರೆ ಮಾಡಿದರೆ ಮಾತ್ರ ಅನುದಾನ ಅವರು ಕೊಡುವುದು. ಅದಕ್ಕಾಗಿಯೇ ಅವರಿಗೆ ಹೆಚ್ಚು ಮಾಡಲಿಕ್ಕೆ ಆಗಲಿಲ್ಲ. ಅದಕ್ಕೇ ನಾನು ಆಗಲೇ ಹೇಳಿದೆ, ಪ್ರತಿ ತಾಲ್ಲೂಕಿಗೂ 50 ಬೆಡ್‌ಗಳ ಆಸ್ಪತ್ರೆ ಒದಗಿಸಿಕೊಡಲಾಗಿದೆ. ತಮ್ಮಲ್ಲೂ ಆಸ್ಪತ್ರೆ ವಿಸ್ತರಿಣೀಕರಣ ನಡೆದಿದೆ. ಇನ್ನೂ 20 ಬೆಡ್ ನಾವು ಕೊಡುತ್ತೇವೆ.

ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) : ಅಧ್ಯಕ್ಷರೆ, 1994ರಲ್ಲೇ ಭಾಲ್ಕಿಯಲ್ಲಿ 100 ಬೆಡ್ ಆಸ್ಪತ್ರೆ ಮಂಜೂರು ಮಾಡಿದ್ದಾರೆ. ಅಲ್ಲಿ ಸರ್ಕಾರಿ ಜಮೀನಿದ್ದರೂ ಕಟ್ಟಡ ಕೆಲಸ ಆರಂಭವಾಗಿಲ್ಲ. ಅಹನ್ನು ತೆಗೆದುಕೊಳ್ಳಲೂ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಮಾಲಕರೆಡ್ಡಿಯವರು ನಮ್ಮ ಉಸ್ತುವಾರಿ ಮಂತ್ರಿಯಾಗಿ ಒಂದು ವರ್ಷವಾಯಿತು. ಈ ಅವಧಿಯಲ್ಲಿ ಇವತ್ತಿನತನಕ ಏನೂ ಆಗಿಲ್ಲ. ಅವರು ನಮ್ಮ ತಾಲ್ಲೂಕಿಗೆ ಬಂದರೆ ತಾಲ್ಲೂಕಿನ ಜನ ಬಾಯ್ಕಾಟ್ ಮಾಡಿದ್ದಾರೆ. ದಯಮಾಡಿ ಅಲ್ಲಿ ಏನು ಕ್ರಮ ಕೈಗೊಳ್ಳುವರೆಂದು ತಿಳಿಸಬೇಕು.

ಡಾ|| ಎ.ಬಿ. ಮಾಲಕರೆಡ್ಡಿ : ಏಕೆ ಡಿಲೇ ಆಗಿದೆ ಎಂದು ಸದಸ್ಯರಿಗೆ ಗೊತ್ತಿಲ್ಲ. 1994ರಲ್ಲೇ ಮಂಜೂರಾತಿ ಆದರೂ ಡಿಲೇ ಏಕಾಯಿತು ಅಂದರೆ ಅವರು ಲ್ಯಾಂಡ್ ಕೊಟ್ಟಿಲ್ಲ. ನಾನು ಸಚಿವನಾದ ಮೇಲೆ ಸ್ವತಃ ಕಂದಾಯ ಸಚಿವರ ಜೊತೆ ಮಾತನಾಡಿ, 1994ರಲ್ಲಿ ನಾನು ಆರೋಗ್ಯ ಸಚಿವನಿದ್ದಾಗ ನನ್ನ ಹೆಲ್ತ್ ಸೆಕ್ರೆಟರಿ ಇದ್ದವನೇ ಶಿಕ್ಷಣದ ಸೆಕ್ರೆಟರಿ ಇದ್ದಾಗ ಆತನ ಕಡೆಯಿಂದ ಎನ್‌ಒಸಿ ತೆಗೆದುಕೊಂಡು

ನೀವು ಮಾಡಲಾರದ ಕೆಲಸ ನಾನು ಮಾಡಿ ಜಾಗ ಬಿಡಿಸಿಕೊಟ್ಟೆ. ಈಗ ಸರ್ಕಾರ ಮಂಜೂರಾತಿ ಕೊಟ್ಟಿದೆ. ಇದು ಕೆಎಸ್‌ಡಬ್ಲ್ಯೂ ಯೋಜನೆಯಡಿ ಬರುವುದರಿಂದ ಈಗಾಗಲೇ ಜರ್ಮನ್ನಿನ ಕೆಎಸ್‌ಡಬ್ಲ್ಯೂ ಆಫೀಸಿಗೆ ಕಳಿಸಿದೆ. ಅದು ಮಂಜೂರಾಗಿ ಬಂದತಕ್ಷಣ ಕೆಲಸ ಪ್ರಾರಂಭಿಸುತ್ತೇವೆ.

ಶ್ರೀ ರಾಜೇಂದ್ರವರ್ಮ (ಹುಲಸೂರು) : ಅಧ್ಯಕ್ಷರೆ, ಸಚಿವರು ನಮ್ಮ ಜಿಲ್ಲೆ ಉಸ್ತುವಾರಿ ಸಚಿವರೂ ಆಗಿದ್ದಾರೆ. ಒಂದು ವರ್ಷವಾಯಿತು, ನಮ್ಮ ಶಾಸಕಮಿತ್ರರು ಹೇಳಿದಂತೆ ಯಾವುದೇ ಒಂದು ಕೆಲಸ ಇಲ್ಲಿಯವರೆಗೆ ಜಾರಿಗೆ ಬರಲಿಲ್ಲ. ಪದೇಪದೇ ಆಸ್ಪತ್ರೆ, ಡಾಕ್ಟರು ಬಗ್ಗೆ ನಾನು ಸಾಕಷ್ಟು ಚರ್ಚೆ ಮಾಡಿದ್ದೇನೆ. ಅವರೂ ವೈದ್ಯರಿದ್ದಾರೆ, ಆರೋಗ್ಯದ ಬಗ್ಗೆ ಎಷ್ಟು ಕಾಳಜಿ ಇರಬೇಕೆಂದು ಅವರಿಗೆ ಗೊತ್ತಿರಬೇಕು. ಆದರೂ ನಮ್ಮ ಹುಲಸೂರು ಆಸ್ಪತ್ರೆಯಲ್ಲಿ ಒಬ್ಬ ಲೇಡಿ ಡಾಕ್ಟರಿದ್ದಾರೆ, ಅವರಿಗೆ ಡೆಪ್ಯುಟೇಶನ್ ಕೊಟ್ಟಿದ್ದಾರೆ. ಇಲ್ಲಿಯವರಿಗೆ ಆ ಡೆಪ್ಯುಟೇಶನ್ ಕ್ಯಾನ್ಸೆಲ್ ಮಾಡಿಸಲು ಹೇಳಲು ಆಗಿಲ್ಲ. ಅಮೇಲೆ ನಮ್ಮಲ್ಲಿ ಮೂರು ಕಟ್ಟಡಗಳಿವೆ. ಆ ಮೂರು ವೇಸ್ಟಾಗಿವೆ. ವೆಹಿಕಲ್ಸ್ ಇಲ್ಲ. ಹೀಗಾದರೆ ಜನರ ಗತಿಯೇನು?

ಅಧ್ಯಕ್ಷರು : ನೋಡಿ ಮಾಲಕರೆಡ್ಡಿಯವರೇ ನೀವು ಇನ್‌ಚಾರ್ಜ್ ಮಿನಿಸ್ಟ್ರು ಹೀಗೆ ಮಾಡಿದರೆ ಹೇಗೆ?

ಡಾ|| ಎ.ಬಿ. ಮಾಲಕರೆಡ್ಡಿ : ಅಧ್ಯಕ್ಷರೆ, ಸರ್ಕಾರ 573 ಮಂದಿಯನ್ನು ನೇಮಕ ಮಾಡಿದೆ. ಅವರು ಹೋಗಿ ಡ್ಯೂಟಿ ರಿಪೋರ್ಟ್ ಮಾಡಿಕೊಳ್ಳಲಿಲ್ಲವೆಂದರೆ ನಾನು ಏನು ಮಾಡಲು ಆಗುತ್ತದೆ?

ಶ್ರೀ ರಾಜೇಂದ್ರವರ್ಮ : ಇದ್ದ ವ್ಯವಸ್ಥೆಯಲ್ಲೇ ಗುಣಮಟ್ಟದ್ದು ಮಾಡಿರಿ ಎಂದು ಹೇಳುತ್ತಿದ್ದೇನೆ. ದಡ್ಡರನ್ನು ತಂದುಹಾಕ್ರಿ ಎಂದು ಹೇಳುತ್ತಿಲ್ಲ. ಇದ್ದವರನ್ನು ವರ್ಗ ಮಾಡಿ ಬಿಟ್ಟರೆ ಜನರ ಗತಿಯೇನು ಎಂದು ಕೇಳುತ್ತಿದ್ದೇನೆ ಅಷ್ಟೇ. ಹೊಸದಾಗಿ ಮಾಡುವುದು ನಿಮಗೆ, ಮತ್ತು ನಿಮ್ಮ ಸರ್ಕಾರಕ್ಕೆ ಬಿಟ್ಟ ಮಾತು. ಅದನ್ನು ನಾನು ಕೇಳುತ್ತಿಲ್ಲ. ನೀವು ಜಿಲ್ಲಾ ಉಸ್ತುವಾರಿ ಸಚಿವರಾಗಿ ಇಲ್ಲಿಯವರೆಗೆ ನಿಮ್ಮ ಇಲಾಖೆ ವತಿಯಿಂದ ಯಾವ ಕೆಲಸ ಮಾಡಿದ್ದೀರಿ?

ಅಧ್ಯಕ್ಷರು : ಬೇಡ, ಆ ಪ್ರಶ್ನೆ ಇಲ್ಲಿ ಕೇಳಬಾರದು. ಡಾಕ್ಟರಂತೆ ಬೇಗನೆ ಹಾಕಿ ಕೊಡಿಯಪ್ಪ ಅವರಿಗೆ. ನಮ್ಮ ತಾಲ್ಲೂಕಿನಲ್ಲೂ 6 ವೈದ್ಯರಿಲ್ಲ, ಸ್ವಲ್ಪ ಬೇಗ ರಿಕ್ರೂಟ್ ಮಾಡಿ.

ಡಾ|| ಎ.ಬಿ. ಮಾಲಕರೆಡ್ಡಿ : ಬೇಗನೆ ಮಾಡುತ್ತೇವೆ.

ಕಾಲೇಜುಗಳಲ್ಲಿ ಅಧ್ಯಾಪಕರ ಕೊರತೆ

411 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಪೂರ್ಣ ಪ್ರಮಾಣದ ಕಾಲೇಜುಗಳಿಗೆ?